ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1162
ಸದಸ್ಯರ ಹೆಸರು	:	ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	22.09.2021
ಉತ್ತರಿಸುವ ಸಚಿವರು	:	ಕಂದಾಯ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ಕೊಡಗು ಜಿಲ್ಲೆಯಲ್ಲಿ ಕಳೆದ 10 ವರ್ಷಗಳಲ್ಲಿ ಅಕ್ರಮ-ಸಕ್ರಮದ ಎಷ್ಟು ಜನ ರೈತರಿಗೆ ಸಾಗುವಳಿ ಚೀಟಯನ್ನು ನೀಡಲಾಗಿದೆ; ಈ ರೀತಿ ಸಾಗುವಳಿ ಚೀಟಿಯನ್ನು ಪಡೆದ ಎಷ್ಟು ಜನರಿಗೆ ಆರ್.ಟಿ.ಸಿ. ಯನ್ನು ನೀಡಲಾಗಿದೆ;	ಕೊಡಗು ಜಿಲ್ಲೆಯಲ್ಲಿ ಕಳೆದ 10 ವರ್ಷಗಳಲ್ಲಿ ಅಕ್ರಮ-ಸಕ್ರಮದಡಿ ಒಟ್ಟು 1235 ಜನ ರೈತರಿಗೆ ಸಾಗುವಳಿ ಚೀಟಿಗಳನ್ನು ನೀಡಲಾಗಿದೆ. ಸಾಗುವಳಿ ಚೀಟಿಯನ್ನು ಪಡೆದಿರುವ 1235 ಜನರಿಗೂ ಆರ್.ಟಿ.ಸಿ. ಯನ್ನು ನೀಡಲಾಗಿದೆ.
(ಆ)	ಇದರಲ್ಲಿ ಯಾವುದಾದರೂ ರೈತರಿಗೆ ಆರ್.ಟಿ.ಸಿ. ಯನ್ನು ರದ್ದುಪಡಿಸಲಾಗಿದೆಯೇ; ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು;	ಇದರಲ್ಲಿ 169 ಪ್ರಕರಣಗಳಲ್ಲಿ ಪಹಣಿಯನ್ನು ರದ್ದುಪಡಿಸಲಾಗಿದೆ. ಅಕ್ರಮ ಸಕ್ರಮ ಸಮಿತಿಯಲ್ಲಿ ಮಂಜೂರಾದ ಪ್ರಕರಣಗಳಲ್ಲಿ ಕೆಲವು ಪ್ರಕರಣಗಳು ನಿಯಮಬಾಹಿರವಾಗಿ ಮಂಜೂರಾಗಿರುತ್ತವೆ ಎಂದು ದೂರು ಸ್ವೀಕೃತವಾಗಿರುತ್ತದೆ. ಅದರಂತೆ ಸರ್ಕಾರದ ಆದೇಶ ಸಂಖ್ಯೆ:ಆರ್.ಡಿ. 26 ಎಲ್‌ಜಿಕ್ಯೂ 2013, ದಿನಾಂಕ:25.09.2013 ಮತ್ತು ಅಪರ ನಿಬಂಧಕರು (ವಿಚಾರಣೆಗಳು-5) ಇವರ ಪತ್ರ ಸಂಖ್ಯೆ: ಕಂಪ್ಲೆಂಟ್/ ಲೋಕ್/ಎಂವೈಎಸ್/2561/2013/ಎಆರ್‌ಇ-5, ದಿನಾಂಕ:28.03.2014 ರ ನಿರ್ದೇಶನದಂತೆ ಕೊಡಗು ಜಿಲ್ಲೆಯಲ್ಲಿ ಅಕ್ರಮ-ಸಕ್ರಮ ಸಮಿತಿಯಲ್ಲಿ ಮಂಜೂರು ಮಾಡಿದ್ದ ಎಲ್ಲಾ ಪ್ರಕರಣಗಳನ್ನು ಪರಿಶೀಲಿಸಿ, ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108ಕೆ ರಡಿಯಲ್ಲಿ 169 ಪ್ರಕರಣಗಳಲ್ಲಿ ಮಂಜೂರಾತಿಯನ್ನು ವಜಾಗೊಳಿಸಿ, ಪಹಣಿಯನ್ನು ರದ್ದುಪಡಿಸಲಾಗಿದೆ.
(ಇ)	ಸಾಗುವಳಿ ಚೀಟಿ ಹಾಗೂ ಆರ್.ಟಿ.ಸಿ. ಗಳನ್ನು ನೀಡಲು ಹೊರಡಿಸಿರುವ ಯಾವುದಾದರೂ ಆದೇಶಗಳನ್ನು ರದ್ದುಪಡಿಸಲಾಗಿದೆಯೇ; ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು? (ವಿವರ ನೀಡುವುದು)	ಸಾಗುವಳಿ ಚೀಟಿ ಹಾಗೂ ಆರ್.ಟಿ.ಸಿ. ಗಳನ್ನು ನೀಡಲು ಹೊರಡಿಸಿರುವ ಯಾವುದೇ ಆದೇಶವನ್ನು ರದ್ದುಪಡಿಸಿರುವುದಿಲ್ಲ.

(ಕಡತ ಸಂಖ್ಯೆ:ಕಂಇ 17 ಎಲ್‌ಜಿಒ 2021)

(ಆರ್.ಅಶೋಕ)
ಕಂದಾಯ ಸಚಿವರು